ಇಲೆಕ್ಷನಪಿಟಿಷನ್ ನಂ. 1/2018
ಪಿ.ಡಬ್ಲೂ 1

**ದಿನಾಂಕಃ 20-11-2018 ರಂದು ಸದ್ರಿ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನುಡಿಯುವ ಮೌಖಿಕ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಒದಗಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾಮಪತ್ರದ ಸ್ವೀಕೃತಿ ಹಾಗೂ ಪರಿಶೀಲನಾ ನೋಟಿಸನ್ನು ನಿಪಿ1 ಎಂದು, ಮುಂಡಗೋಡ ಪಟ್ಟಣಪಂಚಾಯತಿ ವಾರ್ಡ ನಂಃ 18ರ ಮತದಾರರ ಪಟ್ಟಿ ನಿಪಿ2 ಎಂದು, ನಾನು ಸಲ್ಲಿಸಿದ ನಾಮಪತ್ರದ ದೃಢೀಕೃತ ನಕಲನ್ನು ನಿಪಿ3 ಎಂದು, ಎದುರುದಾರರು ಸಲ್ಲಿಸಿದ ನಾಮಪತ್ರ ದೃಢೀಕೃತ ನಕಲನ್ನು ನಿಪಿ4 ಎಂದು, ಎದುರುದಾರರು ಸಲ್ಲಿಸಿದ ಚುನಾವಣಾ ಪ್ರಮಾಣಪತ್ರದ ಪ್ರತಿಯನ್ನು ನಿಪಿ5 ಎಂದು, ಕರ್ನಾಟಕ ರಾಜ್ಯ ಪತ್ರ ದಿನಾಂಕಃ 03-09-2018 ರ ಪ್ರಕಟಣೆಯ ಪ್ರತಿಯನ್ನು ನಿಪಿ6 ಎಂದು, ಚುನಾವಣಾ ಅಧಿಕಾರಿ ಇವರಿಗೆ ಸಲ್ಲಿಸಿದ ತಕರಾರಿ ಅರ್ಜಿಯ ಪ್ರತಿಯನ್ನು ನಿಪಿ7 ಎಂದು, ಪ್ರಿನ್ಸಿಪಾಲರು ಸರಕಾರಿ ಪ್ರಥಮ ದರ್ಜೆ ಕಾಲೇಜು ಮುಂಡಗೋಡ ಇವರಿಗೆ ಕೊಟ್ಟ ಅರ್ಜಿಯ ಪ್ರತಿಯನ್ನು ನಿಪಿ8 ಎಂದು ಗುರುತಿಸಲಾಯಿತು. ಸದರಿ ಅರ್ಜಿಗೆ ಪ್ರಾಂಶುಪಾಲ ಸರಕಾರಿ ಪ್ರಥಮ ದರ್ಜೆ ಕಾಲೇಜು ಮುಂಡಗೋಡ ಇವರು ಕೊಟ್ಟ ಮಾಹಿತಿಯನ್ನು ನಿಪಿ9 ಎಂದು ಗುರುತಿಸಲಾಯಿತು.

ಸದರಿ ಅರ್ಜಿಯಲ್ಲಿ ಗುರುತಿಸಿದಂತೆ ನನಗೆ ನ್ಯಾಯ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಮುಂದುವರೆದ ಪಾಟೀಸವಾಲು** ಃ ಎದುರುದಾರ 2ರ ಪರವಾಗಿ ಶ್ರೀ ಎ.ಜಿ.ಪಿ. ವಕೀಲರಿಂದಃ

ನಾನು ಬಿ.ಎ ಪದವಿದರೆ ಆಗಿದ್ದೇನೆ. ನನ್ನ ಶಾಲಾ ಕಾಲೇಜುಗಳ ದಾಖಲಾತಿಗಳಲ್ಲಿ ನನ್ನ ಹೆಸರು ಗೀತಾ ನಿಂಗಪ್ಪ ಕುರಟ್ಟಿ ಎಂದು ದಾಖಲಾಗಿದೆ. ನನ್ನ ಮದುವೆ ಆದ ನಂತರ ನನ್ನ ಹೆಸರು ಶ್ರೀಲಕ್ಷ್ಮೀ ಶ್ರೀನಿವಾಸ ದೈವಜ್ಞ ಎಂದು ಇರುತ್ತದೆ. ಎದುರುದಾರಳ ವಿವಾಹದ ಪೂರ್ವದ ಹೆಸರು ರಾಜೇಶ್ವರಿ ಶಾಂತಾರಾಮ ಅಂಡಗಿ ಇತ್ತು, ಅವರ ವಿವಾಹದ ನಂತರ ಅವರ ಹೆಸರು ಶ್ರೀಮತಿ ರಾಜೇಶ್ವರಿ ಮಧುಕರ ಗುಂಡ ಎಂದು ಇದೆ. ಅದರಂತೆ ಅವರ ಹೆಸರು ಮತದಾರರ ಪಟ್ಟಿಯಲ್ಲಿ

ಇಲೆಕ್ಷನಪಿಟಿಷನ್ ನಂ. 1/2018
ಪಿ.ಡಬ್ಲೂ 1

ಇದೆ ಎಂದರೆ ಸರಿ. ರಾಜೇಶ್ವರಿ ಮಧುಕರ ಗುಂಡ ಹಾಗೂ ರಾಜೇಶ್ವರಿ ಶಾಂತಾರಾಮ ಅಂಡಗಿ ಈ ಎರಡು ಹೆಸರುಗಳು ಒಂದೇ ವ್ಯಕ್ತಿಯದು ಎಂದರೆ ಸರಿ.

ನಾಮಪತ್ರವನ್ನು ಪರಿಶೀಲನೆಗೆ 20-08-2018 ರಂದು ನಿಗದಿಪಡಿಸಲಾಗಿತ್ತು. ನಾನು ಚುನಾವಣಾ ಅಧಿಕಾರಿ ಎದುರು ತಕರಾರನ್ನು ಸಲ್ಲಿಸುವಾಗ ಎದುರುದಾರಳ ಹೆಸರಿನಲ್ಲಿ ವ್ಯತ್ಯಾಸ ಇದ್ದ ಬಗ್ಗೆ ಮಾತ್ರ ತಕರಾರನ್ನು ಸಲ್ಲಿಸಿದ್ದೇನೆ. ಎದುರುದಾರಳು ತನ್ನ ಹೆಸರಿನಲ್ಲಿ ವ್ಯತ್ಯಾಸ ಇದ್ದ ಬಗ್ಗೆ ಸ್ಪಷ್ಟೀಕರಣ ನೀಡಿ ನಾಮಪತ್ರದೊಂದಿಗೆ ಪ್ರತಿಜ್ಞಾಪತ್ರ ಕೊಟ್ಟಿದ್ದಾಳೆ ಎಂದರೆ ಸರಿ. ಪರಿಶೀಲನೆ ಸಮಯದಲ್ಲಿ ಎದುರುದಾರಳು ಪ್ರಥಮದರ್ಜೆ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಳಾಗಿ ಕೆಲಸ ಮಾಡುತ್ತಿದ್ದ ವಿಷಯವನ್ನು ನನ್ನ ತಕರಾರಿನಲ್ಲಿ ಹೇಳಿಲ್ಲ ಎಂದರೆ ಸರಿ.

ಚುನಾವಣಾ ಅಧಿಕಾರಿ ಇವರಿಗೆ ಚುನಾವಣೆ ಸಂದರ್ಭದಲ್ಲಿ ನಾಮಪತ್ರವನ್ನು ಸ್ವೀಕರಿಸುವ ಬಗ್ಗೆ ಪರಿಶೀಲನೆ ಮಾಡುವ ಬಗ್ಗೆ ನಿಯಮಾವಳಿಗಳು ಇರುತ್ತವೆ ಎಂದರೆ ಸರಿ. ನಿಯಮಾವಳಿಗಳನ್ನು ಪರಿಶೀಲಿಸಿ ಚುನಾವಣಾ ಅಧಿಕಾರಿಗಳು ಎದುರುದಾರಳ ನಾಮಪತ್ರವನ್ನು ಅಂಗೀಕರಿಸಿದ್ದಾರೆ ಎಂದರೆ ಸರಿ. ನಾಮಪತ್ರ ಪರಿಶೀಲನೆ ಮಾಡುವಾಗ ಎದುರುದಾರಳು ಪ್ರಥಮದರ್ಜೆ ಅತಿಥಿ ಉಪನ್ಯಾಸಕಳಾಗಿ ಕೆಲಸ ಮಾಡುತ್ತಿದ್ದ ವಿಷಯವನ್ನು ಚುನಾವಣಾ ಅಧಿಕಾರಿಗಳ ಗಮನಕ್ಕೆ ತಂದಿಲ್ಲ ಎಂದರೆ ಸರಿ. ಆದಕಾರಣ ಚುನಾವಣಾ ಅಧಿಕಾರಿ ಇವರು ಎದುರುದಾರರ ನಾಮಪತ್ರವನ್ನು ಅಂಗೀಕರಿಸುವಲ್ಲಿ ಯಾವ ತಪ್ಪು ಮಾಡಿರುವದಿಲ್ಲ ಎಂದರೆ ಸರಿಯಲ್ಲ. ಎದುರುದಾರ ಎರಡು ಇವರು ಅನವಶ್ಯಕವಾಗಿ ಈ ಪ್ರಕರಣದಲ್ಲಿ ಪಾರ್ಟಿ ಮಾಡಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ದುರುದ್ದೇಶದಿಂದ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯಾವಕಾಶವನ್ನು ಕೋರಿದ್ದರಿಂದ ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

**ಇಲೆಕ್ಷನಪಿಟಿಷನ್ ನಂ. 1/2018**
**ಪಿ.ಡಬ್ಲೂ 1**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ,

ಸಹಿ ಇದೆ
ಹಿರಿಯ ಸಿವಿಲ್ ಜಡ್ಜ್, ಯಲ್ಲಾಪುರ,
ಪೀಠಾಸೀನ ಮುಂಡಗೋಡ